## ಕರ್ನಾಟಕ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 505
2. ಸದಸ್ಯರ ಹೆಸರು : ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19.02.2024
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | 2022-23 ಮತ್ತು 2023-24ನೇ ಸಾಲಿನಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಒಟ್ಟು ಎಷ್ಟು ಪೆಟ್ ಸ್ಕ್ಯಾನ್ ಯಂತ್ರಗಳನ್ನು ಖರೀದಿಸಲಾಗಿದೆ; ಪೆಟ್ ಸ್ಕ್ಯಾನ್ ಯಂತ್ರವನ್ನು ಖರೀದಿಸುವ ಸಲುವಾಗಿ ಕರೆದಿದ್ದ ಟೆಂಡರ್ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ನೀಡುವುದು; | ದಿನಾಂಕ:09.06.2021ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಪಿಪಿಪಿ (ಸಾರ್ವಜನಿಕ- ಖಾಸಗಿ ಸಹಭಾಗಿತ್ವ) ಯೋಜನೆಗಳ 21ನೇ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ಅನುಮೋದನೆಯಂತೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಪೆಟ್- ಸ್ಕ್ಯಾನ್ ಸೇವೆಯನ್ನು ಟೆಂಡರ್ ಪ್ರಕ್ರಿಯೆಯ ಮೂಲಕ ಮೆಸಸ್: ಬಿ.ಎಂ.ಎಸ್. (Bangalore Medical Systems) ಇವರಿಗೆ ಹೊರಗುತ್ತಿಗೆ ನೀಡಲಾಗಿರುತ್ತದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಇದುವರೆವಿಗೆ ಒಂದು ಪೆಟ್- ಸ್ಕ್ಯಾನ್ ಯಂತ್ರವನ್ನು ಮಾತ್ರ ಅಳವಡಿಸಲಾಗಿರುತ್ತದೆ. |
| ಆ) | ಪೆಟ್ ಸ್ಕ್ಯಾನ್ ಯಂತ್ರದ ಸೇವೆಯನ್ನು ಪ್ರಸ್ತುತ ಯಾರು ನಿರ್ವಹಿಸುತ್ತಿದ್ದಾರೆ ಮತ್ತು ಈ ಹಿಂದೆ ಪೆಟ್ ಸ್ಕ್ಯಾನ್ ಯಂತ್ರವನ್ನು ಯಾರು ನಿರ್ವಹಿಸುತ್ತಿದ್ದರು; | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಈ ಹಿಂದೆ ಪೆಟ್-ಸ್ಕ್ಯಾನ್ ಸೇವೆಯ ವ್ಯವಸ್ಥೆಯು ಇರಲಿಲ್ಲ. ಸಂಸ್ಥೆಯಲ್ಲಿ ಪೆಟ್- ಸ್ಕ್ಯಾನ್ ಸೇವೆಯನ್ನು ಮಾರ್ಚ್-2023 ರಿಂದ ಪ್ರಾರಂಭಿಸಲಾಗಿದ್ದು, ಮೆಸಸ್:ಬಿ.ಎಂ.ಎಸ್. (Bangalore Medical Systems) ಇವರಿಗೆ ಹೊರಗುತ್ತಿಗೆ ನೀಡಲಾಗಿರುತ್ತದೆ. |
| ಇ) | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಪೆಟ್ ಸ್ಕ್ಯಾನ್ ಯಂತ್ರವನ್ನು ಖರೀಸುವಲ್ಲಿ ನಡೆದಿರುವ ಹಗರಣದ ತನಿಖೆಯ ಸಮಿತಿಯ ವಿವರ ಹಾಗೂ ಸಮಿತಿಯ ನೀಡಿರುವ ವರದಿಯ ಸಂಪೂರ್ಣ ಮಾಹಿತಿ ನೀಡುವುದು? | ಪಿ.ಪಿ.ಪಿ. ಆಧಾರದ ಮೇಲೆ ಪ್ರಾರಂಭಿಸಲಾದ ಪೆಟ್ ಸಿಟಿ ಸ್ಕ್ಯಾನ್ ಸೇವೆಯೂ ಸೇರಿದಂತೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಇಲ್ಲಿ ನಡೆದಿವೆ ಎನ್ನಲಾದ ಒಟ್ಟಾರೆ ಅವ್ಯವಸ್ಥೆ, ಅಕ್ರಮಗಳ ಕುರಿತಂತೆ ತನಿಖೆ ನಡೆಸಿ ವರದಿ ನೀಡುವ ಸಲುವಾಗಿ ನೇಮಿಸಲಾದ ತನಿಖಾ ಸಮಿತಿಯು ತನ್ನ ವರದಿಯನ್ನು ನೀಡಿದ್ದು, ಸದರಿ ವರದಿಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |

**ಸಂಖ್ಯೆ:** ಎಂಇಡಿ 35 ಕೆಯುಎಂ 2024

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.